**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 510/2024**

**ಪ್ರಾಸಾಃ- 1 ಚಾಸಾಃ- 1**

| | | |
|---|---|---|
| ಸಾಕ್ಷಿಯ ಹೆಸರು | : | ಆಶಾ ಸುಮಿತಾ ಬಾಯಿ |
| ಗಂಡನ ಹೆಸರು | : | ಸಂಪತ್ ನಾಯಕ್ |
| ವಯಸ್ಸು | : | 49 ವರ್ಷ |
| ವೃತ್ತಿ | : | ಪ್ರಾಂಶುಪಾಲರು |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 5.12.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನನಗೆ ಚಾಸಾ 2 ಮತ್ತು 3 ರವರ ಪರಿಚಯ ಇದೆ. ಚಾಸಾ 4 ನನ್ನ ತಾಯಿ. ಚಾಸಾ 5 ನನ್ನ ಅಕ್ಕ. ಚಾಸಾ 6 ನನ್ನ ಮಗ. ಚಾಸಾ 7 ರಿಂದ 9 ರವರ ಪರಿಚಯ ಇದೆ. ನಾನು ಲಂಬಾಣಿ ಜನಾಂಗಕ್ಕೆ ಸೇರಿದ್ದೇನೆ. ನನಗೆ ಆರೋಪಿತರ ಪರಿಚಯ ಇದೆ. ಅವರು ಪದ್ಮಶಾಲಿ ಜನಾಂಗಕ್ಕೆ ಸೇರಿದ್ದಾರೆ. ರಾಮಾಂಜಿನೇಯ ನಗರದಲ್ಲಿ ನನ್ನ ತಾಯಿಯ ಹೆಸರಿನಲ್ಲಿ ಒಂದು ಮನೆ ಇದೆ. ಸದರಿ ಮನೆಯು ಆರೋಪಿತರ ಮನೆಯ ಪಕ್ಕದಲ್ಲಿ ಇದೆ. 2023 ರಲ್ಲಿ ಆರೋಪಿತರು ಹಳೆಯ ಮನೆಯನ್ನು ಖರೀದಿಸಿ ಅದನ್ನು ಕೆಡವಿ ಹೊಸ ಮನೆ ನಿರ್ಮಿಸುತ್ತಿದ್ದರು. ಆರೋಪಿತರು ಮನೆ ಕಟ್ಟುವ ಸಮಯದಲ್ಲಿ ನಮ್ಮ ಮನೆಯ ಕಾಂಪೌಂಡ್ ನ್ನು ಜಖಂಗೊಳಿಸಿರುತ್ತಾರೆ ಮತ್ತು ನಮ್ಮ ಮನೆಯ ಸಂಪ್‌ನ್ನು ನಾಶ ಮಾಡಿರುತ್ತಾರೆ. ಈ ಬಗ್ಗೆ ನಾವು 4 ನೇ ಎಸಿ ಜೆ ಮತ್ತು ಜೆ ಎಂ ಎಫ್ ಸಿ ನ್ಯಾಯಲಯದಲ್ಲಿ ಒ ಎಸ್ 261-2023 ಸಿವಿಲ್ ದಾವೆಯನ್ನು ಆರೋಪಿತರ ವಿರುದ್ದ ಹಾಕಿದ್ದೆವು. ಸದರಿ ದಾವೆ ಚಾಲ್ತಿಯಲ್ಲಿದೆ.

ದಿಃ 8-7-2023 ರಂದು ನಾನು ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದಾಗ ಚಾಸಾ 6 ನನಗೆ ಫೋನ್ ಮಾಡಿ ಆರೋಪಿತರು ಮದ್ಯಾಹ್ನ 3-00 ಗಂಟೆ ಸಮಯದಲ್ಲಿ ನನ್ನ ತಾಯಿ ಮತ್ತು ನನ್ನ ಅಕ್ಕ ನೊಂದಿಗೆ ಜಗಳವಾಡಿ ಅವರಿಗೆ ಹೊಡೆದಿದ್ದಾರೆ ಎಂದು ತಿಳಿಸಿದ್ದ. ನಾನು ಕಾಲೇಜಿನಿಂದ ತಕ್ಷಣ ಮನೆಗೆ ಬಂದೆ. ನಾನು ನನ್ನ ತಾಯಿ ಮತ್ತು ಅಕ್ಕನನ್ನು ಘಟನೆಯ ಬಗ್ಗೆ ವಿಚಾರಿಸಿದ್ದೆ.

ಆರೋಪಿತರು ಮದ್ಯಾಹ್ನ 3-00 ಗಂಟೆಗೆ ನಮ್ಮ ಮನೆಯ ಕಾಂಪೌಂಡ್ ಗೆ ಬಂದು ನನ್ನ ತಾಯಿ ಮತ್ತು ನನ್ನ ಅಕ್ಕನೊಂದಿಗೆ ಜಗಳ ತೆಗೆದು ಅವರಿಗೆ ಲಂಬಾಣಿ ಜಾತಿಗೆ ಸೇರಿದ ಕಂತ್ರಿ ಸೂಳೇರೆ ಎಂದು ಮತ್ತು ನಮ್ಮ ಮೇಲೆ ಕೇಸು ಹಾಕುತ್ತೀರಾ ಎಂದು ಅವಾಚ್ಯ ಶಬ್ದಗಳಿಂದ ಬೈದ ಬಗ್ಗೆ ಮತ್ತು ಪ್ರಾಣ ಬೆದರಿಕೆ ಹಾಕಿದ ಬಗ್ಗೆ ನನ್ನ ತಾಯಿ ಮತ್ತು ನನ್ನ ಅಕ್ಕ ನನಗೆ ತಿಳಿಸಿದ್ದರು. ಗಾಯಗೊಂಡಿದ್ದ ಚಾಸಾ 4 ಮತ್ತು 5 ರವರನ್ನು ನಾನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. ಹಿರಿಯರು ಸಮಸ್ಯೆಯನ್ನು ಮಾತನಾಡಿಕೊಂಡು ಬಗೆಹರಿಸಿಕೊಳ್ಳಲು ತಿಳಿಸಿದ್ದರು. ಆದ್ದರಿಂದ ನಾನು ತಕ್ಷಣ ಪೋಲೀಸರಿಗೆ ದೂರು ಕೊಟ್ಟಿರಲಿಲ್ಲ. ಆರೋಪಿತರು ಪುನಃ ತೊಂದರೆ ಕೊಡುವಂತೆ ಕಂಡು ಬಂದಿದ್ದರಿಂದ ನಾನು ತಡವಾಗಿ ದಿಃ 30-3-2024 ರಂದು ಪೋಲೀಸರ ಮುಂದೆದೂರು ಕೊಟ್ಟಿದ್ದೆ. ಸಾಕ್ಷಿಯು ಗುರುತಿಸಿದ ದೂರನ್ನು ನಿಪಿ-1 ಎಂದು ಮತ್ತು ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಚಾಸಾ 7 ರಿಂದ 9 ರವರು ಜಗಳ ನೋಡಿದ್ದರು.

ದಿಃ 31-3-2024 ರಂದು ಪೋಲೀಸರು ಘಟನೆ ಸ್ಥಳಕ್ಕೆ ಪಂಚರಾದ ಚಾಸಾ 2 ಮತ್ತು 3 ರವರೊಂದಿಗೆ ಬಂದಿದ್ದರು. ನಾನು ಪೋಲೀಸರಿಗೆ ಮತ್ತು ಪಂಚರಿಗೆ ಕೃತ್ಯಸ್ಥಳವನ್ನು ತೋರಿಸಿದ್ದೆ. ಪೋಲೀಸರು ಸದರಿ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿದ್ದರು. ಸಾಕ್ಷಿ ಗುರುತಿಸಿದ ಪಂಚನಾಮೆಯನ್ನು ನಿಪಿ-2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ಪೋಟೋವನ್ನು ನಿಪಿ-3 ಎಂದು ಗುರುತಿಸಲಾಯಿತು. ಸದರಿ ಪೋಟೋವನ್ನು ಪಂಚನಾಮೆ ಸಮಯದಲ್ಲಿ ತೆಗೆದಿದ್ದರು. ಚಾಸಾ 4 ಮತ್ತು 5 ರವರನ್ನು ದಿಃ 10-7-2023 ರಂದು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. ನಂತರ ಪೋಲೀಸರು ಘಟನಯ ಬಗ್ಗೆ ನನ್ನನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿದ್ದರು. ಸಾಕ್ಷಿಯು ಆರೋಪಿ 1 ಮತ್ತು 2 ರವರನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜಿ ವಿ ವಕೀಲರಿಂದಃ</u>

ಚಾಸಾ 6 ನನಗೆ ಘಟನೆಯ ಬಗ್ಗೆ ಮೊಬೈಲ್ ಮೂಲಕ ತಿಳಿಸಿದ್ದ. ಸದರಿ ಮೊಬೈಲ್ ನಂಬರ್ ನ್ನು ನಾನು ದೂರಿನಲ್ಲಿ ಹೇಳಿಲ್ಲ. ನನಗೆ ಮಾಹಿತಿ ಬಂದ ನನ್ನ ಮೊಬೈಲ್ ನಂಬರ್ ನ್ನು ದೂರಿನಲ್ಲಿ ಹೇಳಿಲ್ಲ. ಚಾಸಾ 6 ಪ್ರತಿ ದಿವಸ ನಂದಿ ಇಂಟರ್ ನ್ಯಾಷನಲ್ ಸ್ಕೂಲಿಗೆ ಹೋಗುತ್ತಾನೆ. ಸೋಮವಾರದಿಂದ ಶುಕ್ರವಾದವರೆಗೆ ಆತನ ಶಾಲಾ ಸಮಯ ಮುಂಜಾನೆ 9-00 ಗಂಟೆಯಿಂದ ಸಂಜೆ 4-00 ಗಂಟೆವರೆಗೆ ಇರುತ್ತದೆ. ಶನಿವಾರದಂದು ಮುಂಜಾನೆ 9-00 ಗಂಟೆಯಿಂದ ಮದ್ಯಾಹ್ನ 2-00 ಗಂಟೆವರೆಗೆ ಇರುತ್ತದೆ. ಶಾಲಾ ಬಸ್‌ನಲ್ಲಿ ಆತ ಶಾಲೆಗೆ ಹೋಗುತ್ತಾನೆ. ನನ್ನ ಮನೆಯಿಂದ ಆತನ ಶಾಲೆ ಸುಮಾರು 4 ರಿಂದ 5 ಕಿ. ಮೀ. ದೂರ ಆಗುತ್ತದೆ. ಶಾಲೆಯಿಂದ ಮನೆಗೆ ಬರಲು ಸುಮಾರು 20 ನಿಮಿಷ ಸಮಯ ಬೇಕಾಗುತ್ತದೆ. ನನ್ನ ಮಗ ಯಾವುದೇ ಮೊಬೈಲ್ ಉಪಯೋಗಿಸುವುದಿಲ್ಲ. ಚಾಸಾ 5 ರವರಿಗೆ ಕಣ್ಣು ಕಾಣದೇ ಇರುವ ಕಾರಣ ಅವಳು ಮೊಬೈಲ್‌ನ್ನು ಉಪಯೋಗಿಸುವುದಿಲ್ಲ ಆದರೆ ಕರೆ ಸ್ವೀಕರಿಸಲು ಮೊಬೈಲ್ ಉಪಯೋಗಿಸುತ್ತಾರೆ. ನನ್ನ ತಾಯಿಯದು ಸ್ವಂತ ಮೊಬೈಲ್ ಇಲ್ಲ. ಮನೆಯಲ್ಲಿ ಒಂದು ಕೀಪ್ಯಾಡ್ ಮೊಬೈಲ್ ಇರುತ್ತದೆ ಎಂದು ಸಾಕ್ಷಿ ಹೇಳಿರುತ್ತಾರೆ. ಆರೋಪಿತರು ಕಟ್ಟಿಸಿರುವ ಮನೆಯ ಜಾಗೆ ನಮ್ಮ ಮನೆಯ ಪಕ್ಕದಲ್ಲಿ ಇದೆ. ಸದರಿ ಜಾಗೆಯನ್ನು ನಾವು ಖರೀದಿಸುವ ಪ್ರಯತ್ನ ಮಾಡಿದ್ದೆವು ಎಂದರೆ ಸರಿಯಲ್ಲ. ನಾವು ಖರೀದಿಸಬೇಕೆಂದಿದ್ದ ಆಸ್ತಿಯನ್ನು ಆರೋಪಿತರು ಪೈಪೋಟಿ ಮಾಡಿ ಖರೀದಿ ಮಾಡಿದ್ದರಿಂದ ಆರೋಪಿತರ ವಿರುದ್ಧ ನಮಗೆ ಆಸ್ತಿ ಖರೀದಿಸಿದಾಗಿನಿಂದ ದ್ವೇಷ ಇದೆ ಎಂದರೆ ಸರಿಯಲ್ಲ. ಆರೋಪಿತರು ಆಸ್ತಿ ಖರೀದಿ ಮಾಡುವ ಮೊದಲು ನಮ್ಮ ಮನೆಯ ಓಣಿಯಲ್ಲಿಯೇ ಇದ್ದರು ಎಂದರೆ ಸರಿ. ಆ ಸಮಯದಲ್ಲಿ ಆರೋಪಿತರು ಮತ್ತು ನಮ್ಮ ನಡುವೆ ಯಾವುದೇ ದ್ವೇಷ ಇರಲಿಲ್ಲ. ನನ್ನ ತಾಯಿಯಿಂದ ನಾನೇ ದಾವೆಯನ್ನು ಹಾಕಿಸಿದ್ದೇನೆ ಎಂದರೆ ಸಾಕ್ಷಿಯು ನನ್ನ ತಾಯಿ ಅನಕ್ಷರಸ್ಥಳಿರುವುದರಿಂದ ನಾನು ಅವಳ ಜೊತೆ ದಾವೆ ಹಾಕಿಸಿದ್ದೆ ಎಂದು ಹೇಳಿರುತ್ತಾರೆ. ದಿಃ 8-7-2023 ರಂದು ನಾನು ನನ್ನ ತಾಯಿ ಮತ್ತು ಅಕ್ಕರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. ಎಂ ಆರ್ ಐ ಮಾಡಿಸಬೇಕು

ಎಂದು ಹೇಳಿದ್ದರಿಂದ ಅವರನ್ನು ಪುನಃ ವಾಪಾಸ್ಸು ಮನೆಗೆ ಕರೆದುಕೊಂಡು ಬಂದಿದ್ದೆ. ನಾನು ದಿಃ 8-7-2023 ರಂದು ನನ್ನ ತಾಯಿ ಮತ್ತು ಅಕ್ಕಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 6 ನನಗೆ ಪೋನ್ ಮಾಡಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿವಸ ನಾನು ಮದ್ಯಾಹ್ನ 3-00 ಗಂಟೆಗೆ ಮನೆಗೆ ಬಂದಿದ್ದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ಅಕ್ಕ ನನಗೆ ಯಾವುದೇ ಸಂಗತಿಗಳನ್ನು ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಹೇಳಿದಂತಹ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ನಿಪಿ-3 ಪೋಟೋದಲ್ಲಿ ನಮ್ಮ ಮನೆಯ ಕಾಂಪೌಂಡ್ ಗೋಡೆ ಮತ್ತು ಸಂಪ್ ನಾಶ ಆಗಿರುವುದು ಕಂಡು ಬರುತ್ತಿಲ್ಲ ಎಂದರೆ ಸರಿ. ಆರೋಪಿತರು ನಮ್ಮ ಮನೆಯ ಕಾಂಪೌಂಡ್ ಗೋಡೆಯನ್ನು ಮತ್ತು ಸಂಪ್‌ನ್ನು ನಾಶ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ 2, 3, ಡಿ ವೈ ಎಸ್ ಪಿ ಮತ್ತು ಕೌಲ್‌ಬಜಾರ್ ಪೋಲೀಸರು ಪಂಚಾನಾಮೆ ಸಮಯದಲ್ಲಿ ಹಾಜರು ಇದ್ದರು. ಚಾಸಾ 2 ಮತ್ತು 3 ನಮ್ಮ ಸಮುದಾಯದವರು ಎಂದರೆ ನನಗೆ ಗೊತ್ತಿಲ್ಲ. ಅವರುಗಳ ಪರಿಚಯ ನನಗೆ ಮೊದಲು ಇರಲಿಲ್ಲ. ಪೋಲೀಸರು ಸ್ಥಳಕ್ಕೆ ಲ್ಯಾಪ್ ಟಾಪ್‌ನ್ನು ತಂದಿದ್ದರು. ಪ್ರಿಂಟರ್ ನ್ನು ತಂದಿರಲಿಲ್ಲ. ಆ ದಿವಸ ಪೋಲೀಸರು ನಮಗೆ ಮರುದಿವಸ ಠಾಣೆಗೆ ಬರುವಂತೆ ಹೇಳಿದ್ದರು. ಠಾಣೆಯಲ್ಲಿ ಪೋಲೀಸರು ನನ್ನ ಸಹಿಯನ್ನು ನಿಪಿ-2 ರಲ್ಲಿ ತೆಗೆದುಕೊಂಡಿದ್ದರು. ಪಂಚರು ನಿಪಿ-2 ರಲ್ಲಿ ಯಾವಾಗ ಸಹಿ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಪೋಲೀಸರು ನನ್ನನ್ನು ಚಾಸಾ 2 ಮತ್ತು 3 ರವರನ್ನು ಪಂಚನಾಮೆಗೆ ಕರೆಸಿರಲಿಲ್ಲ ಮತ್ತು ನಮ್ಮ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ 5 ರಿಂದ 9 ರವರು ಘಟನೆಯ ಸಮಯದಲ್ಲಿ ಹಾಜರು ಇದ್ದರು ಎಂದು ಮತ್ತು ಘಟನೆಯನ್ನು ನೋಡಿದ್ದರು ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 4 ಮತ್ತು 5 ರವರಿಗೆ ಯಾವುದೇ ಗಾಯಗಳು ಆಗಿರಲಿಲ್ಲ ಮತ್ತು ನಾನು ಅವರುಗಳನ್ನು ದಿಃ 10-7-2023 ರಂದು ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿತರು

ಚಾಸಾ 4 ಮತ್ತು 5 ರವರಿಗೆ ಜಾತಿ ಹೆಸರು ಹಿಡಿದು ನಿಂದಿಸಿಲ್ಲ ಮತ್ತು ಅವರಿಗೆ ಹೊಡೆ ಬಡೆ ಮಾಡಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಾವು ಖರೀದಿಸಬೇಕೆಂದಿದ್ದ ಆಸ್ತಿಯನ್ನು ಖರೀದಿಸಿ ಹೊಸ ಮನೆ ಕಟ್ಟಿಸಿದ್ದರಿಂದ ಅಸಮಾಧಾನದಿಂದ ಆರೋಪಿತರ ವಿರುದ್ದ ನಾನು ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**